ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) : ಮಾನ್ಯ ಉಪಾಧ್ಯಕ್ಷೆಯವರೇ ದಿನಾಂಕ 5-1-1993ರ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಮಂಡಿಸುತ್ತೇನೆ.

ವೈನ್ ಶಾಪ್‌ಗಳಿಗೆ ನೀಡಲಾದ ಲೈಸನ್ಸ್‌ಗಳ ಸಂಖ್ಯೆ

1059 - ಶ್ರೀ ಆರ್.ಎನ್. ಜಾಲಪ್ಪ (ದೊಡ್ಡಬಳ್ಳಾಪುರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1988-89, 1989-90, 1990-91, 1991-92 ಮತ್ತು 1992-93ರ ಸಾಲಿಗೆ ಇದುವರೆಗೆ ನೀಡಲಾದ ವೈನ್ ಶಾಪ್ ಲೈಸನ್ಸ್‌ಗಳ ಸಂಖ್ಯೆ ಎಷ್ಟು?

ಆ) ಈಗ ಹಾಲಿ ಇರುವ ವೈನ್ ಶಾಪ್‌ಗಳ ಸಂಖ್ಯೆ ಎಷ್ಟು?

ಇ) ಮೇಲೆ ಹೇಳಲಾದ ವರ್ಷಗಳಲ್ಲಿ ಆಗಿರುವ ಆಬಕಾರಿ ಆದಾಯ ಎಷ್ಟು?

ಈ) ಸಾರಾಯಿ ಅಂಗಡಿಗಳಿಂದ ಮೇಲೆ ಹೇಳಲಾದ ವರ್ಷಗಳಲ್ಲಿ ಬಂದಿರುವ ಆದಾಯ ಎಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ಕಳೆದ 5 ವರ್ಷಗಳಲ್ಲಿ ನೀಡಲಾದ ವೈನ್ ಶಾಪ್‌ಗಳ ಸಂಖ್ಯೆ ಈ ರೀತಿಯಾಗಿ ಇರುತ್ತದೆ (ಅಬಕಾರಿ ವರ್ಷಕ್ಕೆ)

ಸಿಎಲ್-2 (ಚಿಲ್ಲರೆ ಮದ್ಯ ಮಾರಾಟ ಅಂಗಡಿ)

1	1988-89	1,082
2	1989-90	3,166
3	1990-91	3,445
4	1991-92	3,769
5	1992-93	3,810

ಆ) 3810

ಇ) ಕೆಳಗೆ ನೀಡಿರುವ ವಿವರಗಳಂತೆ

(ಆರ್ಥಿಕ ವರ್ಷಕ್ಕೆ)		ರೂ. ಕೋಟಿಗಳಲ್ಲಿ
1.	1988-89	258.89
2.	1989-90	327.57
3.	1990-91	429.47
4.	1991-92	510.32
5.	1992-93	237.46

(ಸೆಪ್ಟೆಂಬರ್ 92 ರವರೆಗೆ)

ಈ) ಕೆಳಗೆ ನೀಡಿರುವ ವಿವರಗಳಂತೆ

(ಆರ್ಥಿಕ ವರ್ಷಕ್ಕೆ	ರೂ. ಕೋಟಿಗಳಲ್ಲಿ)
1. 1988-89	111-91
2. 1989-90	145.56
3. 1990-91	261.00
4 1991-92	362.46
5 1992-93	140.31

(ಸೆಪ್ಟೆಂಬರ್ 92 ರವರೆಗೆ)

ನೆಲಮಂಗಲ ಮತ್ತು ತುಮಕೂರು ನಡುವೆ ಆಗುವ ಅಪಘಾತಗಳ ನಿವಾರಣೆ

78 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನೆಲಮಂಗಲ ಮತ್ತು ತುಮಕೂರು ನಡುವೆ ಪ್ರತಿ ದಿವಸ ಆಗುವ ಅಪಘಾತದ ಮರಣವನ್ನು ನಿವಾರಿಸಲು ಸಂಚಾರಿ ಆರೋಗ್ಯ ಘಟಕದ ವಾಹನ ಓಡಿಸುವ ಬಗ್ಗೆ ವಚನ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸಂಚಾರಿ ಆರೋಗ್ಯ ಘಟಕದ ವಾಹನ ಓಡಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಇ) ಇದಕ್ಕೆ ಬೇಕಾಗುವ ಕಾಲಮಿತಿ ಏನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಈ ಪ್ರಸ್ತಾವನೆಯು ವಿಧಾನ ಸಭೆಯಲ್ಲಿ ಚರ್ಚಿಸುವ ಸಂದರ್ಭದಲ್ಲಿ ಮಾನ್ಯ ಆರೋಗ್ಯ ಸಚಿವರು ಸರ್ಕಾರದ ಮಟ್ಟದಲ್ಲಿ ಈ ಬಗ್ಗೆ ಪರಿಶೀಲನೆ ಮಾಡಿ ಬೆಂಗಳೂರು ಸುತ್ತಾ 40 ಅಥವಾ 50 ಕಿ.ಮೀ. ವ್ಯಾಸದಲ್ಲಿ ಈ ಒಂದು ವ್ಯವಸ್ಥೆ ಮಾಡಿ ಗಾಯಾಳುಗಳಿಗೆ ತಕ್ಷಣ ಚಿಕಿತ್ಸೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ ಎಂದು ತಿಳಿಸಿರುವುದು ನಿಜ. ಆರೋಗ್ಯ ಘಟಕದ ವಾಹನ ಓಡಿಸುವ ಬಗ್ಗೆ ಏನೂ ಆಶ್ವಾಸನೆ ನೀಡಿಲ್ಲ.

ಆ) ಮೇಲ್ಕಂಡ ಆಶ್ವಾಸನೆಯಂತೆ ನೆಲಮಂಗಲದ ಆಸ್ಪತ್ರೆಯನ್ನು ತುರ್ತು ಚಿಕಿತ್ಸೆಯ ಟ್ರಾಮಾ ಕೇಂದ್ರ ಸಹಿತದ 100ಹಾಸಿಗೆ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಲಾಗಿದೆ. ಆದುದರಿಂದ ಸಂಚಾರಿ ಆರೋಗ್ಯ ಘಟಕದ ವಾಹನವನ್ನು ಓಡಿಸಲು ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಚಿತ್ರದುರ್ಗ ಜಿಲ್ಲೆಯಲ್ಲಿ ಮಾವಿನ ಬೆಳೆ ಯೋಜನೆ

80 - ಶ್ರೀ ಇಲ್ಯಾಸ್ ವಿಜಯಕುಮಾರ್ (ಹೊಸದುರ್ಗ) : ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿತ್ರದುರ್ಗ ಜಿಲ್ಲೆಯಲ್ಲಿ ಮಾವಿನ ಫಸಲು ಬೆಳೆಸಲು ಸರ್ಕಾರದಲ್ಲಿ ಯೋಜನೆಗಳಿವೆಯೇ?

ಆ) ಮಾವಿನ ಫಸಲನ್ನು ಬೆಳೆಯುವ ರೈತರು ಸುಧಾರಿತ ತಳಿಗಳನ್ನು ತರಿಸಲು ಮನವಿಯನ್ನು ಸಲ್ಲಿಸಿರುವರೇ ?